सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

(ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ), 1ನೇ ಮಹಡಿ, ನಂ.8, ಕನ್ನಿಂಗ್‌ಹ್ಯಾಂ ರಸ್ತೆ. ಬೆಂಗಳೂರು-52)

**ರಾಚುಆ: 42: ಇಜಿಪಿ:2016, ದಿನಾಂಕ: 02-11-2016**

## ಪತ್ರಿಕಾ ಪ್ರಕಟಣೆ

ರಾಜ್ಯ ಚುನಾವಣಾ ಆಯೋಗವು, ಹೊಸದಾಗಿ ರಚಿತವಾದ, ಪುನರ್ ರಚಿತ ಮತ್ತು ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಚುನಾವಣೆ ನಡೆಸಲು ಬಾಕಿ ಇದ್ದ ಈ ಕೆಳಕಂಡ 9 ಗ್ರಾಮ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆ ನಡೆಸಲು ಮತ್ತು ವಿವಿಧ ಕಾರಣಗಳಿಂದ ಆಕಸ್ಮಿಕವಾಗಿ ತೆರವಾಗಿರುವ ಈ ಕೆಳಕಂಡ ಜಿಲ್ಲಾ ಪಂಚಾಯಿತಿಯ 2(ಎರಡು) ಕ್ಷೇತ್ರಗಳಿಗೆ ಮತ್ತು ತಾಲ್ಲೂಕು ಪಂಚಾಯಿತಿಯ 2(ಎರಡು) ಕ್ಷೇತ್ರಗಳಿಗೆ ಉಪ ಚುನಾವಣೆಯನ್ನು ನಡೆಸಲು ಈ ದಿನ ದಿನಾಂಕ:02-11-2016ರಂದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಎ ಮತ್ತು 308ಎಬಿ ರನ್ವಯ ಚುನಾವಣಾ ವೇಳಾ ಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿದೆ.

### ಚುನಾವಣೆ ನಡೆಸಲಾಗುತ್ತಿರುವ ಗ್ರಾಮ ಪಂಚಾಯಿತಿಗಳ ವಿವರ

| ಕ್ರ. ಸಂ. | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | | ಗ್ರಾಮ ಪಂಚಾಯತಿ ಹೆಸರು | ಒಟ್ಟು ಸದಸ್ಯ ಸ್ಥಾನಗಳು |
|---|---|---|---|---|---|
| 1. | ಬೆಳಗಾವಿ | ರಾಯಭಾಗ್ | 1 | ಯಲ್ಪಾರಟ್ಟಿ | 10 |
| | | | 2 | ಯಡ್ರಾಂವ | 8 |
| | | ರಾಮದುರ್ಗ | 3 | ತುರನೂರ | 10 |
| | | | 4 | ಹಲಗತ್ತಿ | 11 |
| | | | 5 | ಓಬಳಾಪುರ | 9 |
| 2. | ಧಾರವಾಡ | ಕುಂದಗೋಳ | 6 | ಚಾಕಲಬ್ಬಿ | 14 |
| 3. | ಬೆಂಗಳೂರು ನಗರ | ಬೆಂಗಳೂರು(ಉತ್ತರ) | 7 | ಬೆಟ್ಟಹಲಸೂರು | 26 |
| | | | 8 | ಬಾಗಲೂರು | 26 |
| | | | 9 | ಸಾತನೂರು | 11 |

-2-

**ವಿವಿಧ ಕಾರಣಗಳಿಂದ ತೆರವಾಗಿರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿರುವ ಕ್ಷೇತ್ರಗಳ ವಿವರ:**

**ಜಿಲ್ಲಾ ಪಂಚಾಯಿತಿ**

| ಕ್ರ.ಸಂ. | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಚುನಾವಣೆ ನಡೆಯುತ್ತಿರುವ ಕ್ಷೇತ್ರದ ಹೆಸರು. |
|---|---|---|---|
| 1 | ಧಾರವಾಡ | ಧಾರವಾಡ | 3–ಹೆಬ್ಬಳ್ಳಿ |
| 2 | ಉತ್ತರ ಕನ್ನಡ | ಜೋಯಿಡಾ | 1–ರಾಮನಗರ |

**ತಾಲ್ಲೂಕು ಪಂಚಾಯಿತಿ**

| | | | |
|---|---|---|---|
| 1 | ಬೆಳಗಾವಿ | ಚಿಕ್ಕೋಡಿ | 17–ಕೋಡ್ನಿ |
| 2 | ಕಲಬುರಗಿ | ಆಳಂದ | 23–ತಡಕಲ |

**ಚುನಾವಣಾ ವೇಳಾಪಟ್ಟಿ**

| | | |
|---|---|---|
| 1 | ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ | 07–11–2016 (ಸೋಮವಾರ) |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | 10–11–2016 (ಗುರುವಾರ) |
| 3 | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | 11–11–2016 (ಶುಕ್ರವಾರ) |
| 4 | ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ | 14–11–2016 (ಸೋಮವಾರ) |
| 5 | ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಬೆಳಿಗ್ಗೆ 7–00 ಗಂಟೆಯಿಂದ ಸಂಜೆ 5–00ಗಂಟೆಯವರೆಗೆ) | 20–11–2016 (ಭಾನುವಾರ) |
| 6 | ಮರು ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಬೆಳಿಗ್ಗೆ 7–00 ಗಂಟೆಯಿಂದ ಸಂಜೆ 5–00ಗಂಟೆಯವರೆಗೆ) | 22–11–2016 (ಮಂಗಳವಾರ) |
| 7 | ಮತಗಳ ಎಣಿಕೆ ದಿನಾಂಕ ಮತ್ತು ದಿನ (ಬೆಳಿಗ್ಗೆ 8.00 ಘಂಟೆಯಿಂದ) (ತಾಲ್ಲೂಕು ಕೇಂದ್ರಗಳಲ್ಲಿ) | 23–11–2016 (ಬುಧವಾರ) |
| 8 | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ | 23–11–2016 (ಬುಧವಾರ) |

ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಚುನಾವಣಾ ನೀತಿ ಸಂಹಿತೆಯು ಚುನಾವಣೆ ನಡೆಯುವ **ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ,** ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆ ನಡೆಯುವ **ಕ್ಷೇತ್ರಗಳ** ವ್ಯಾಪ್ತಿಯಲ್ಲಿಯೂ **ದಿನಾಂಕ: 07–11–2016** ರಿಂದ **ದಿನಾಂಕ: 23–11–2016** ರವರೆಗೆ ಜಾರಿಯಲ್ಲಿರುತ್ತದೆ.

(ನಾಗರಾಜು ಎನ್.ಆರ್)
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ
02/11/2016

<u>ಪ್ರತಿಯನ್ನು:</u>

1. ನಿರ್ದೇಶಕರು, ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಗಳೂರು ಇವರಿಗೆ ಕಳುಹಿಸಿ ಪತ್ರಿಕಾ ಪ್ರಕಟಣೆಯನ್ನು ಸುದ್ದಿ ಮಾಧ್ಯಮದಲ್ಲಿ ಪ್ರಕಟಿಸುವಂತೆ ಕೋರಿದೆ.
2. ಸಂಪಾದಕರು/ ವ್ಯವಸ್ಥಾಪಕರು, ದಿನಪತ್ರಿಕೆಗಳು ಮತ್ತು ದೂರದರ್ಶನ ಸುದ್ದಿ ವಾಹಿನಿಗಳು.